ಸಾಕ್ಷಿಯನ್ನು ದಿನಾಂಕ 17-05-2023 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಆರೋಪಿ ಪರವಾಗಿ ಶ್ರೀ ಎಸ್.ಎಸ್.ಎ. ವಕೀಲರಿಂದಃ

ಆರೋಪಿ ವಿರುದ್ಧ ನಿಪಿ-1 ರಂತೆ ದೂರು ಕೊಡುವುದಕ್ಕೂ ಮೊದಲು ನಾನು ನನ್ನ ಮೇಲಾಧಿಕಾರಿಯವರಿಂದ ಅನುಮತಿ ಪಡೆದಿಲ್ಲ. ಈ ಪ್ರಕರಣದಲ್ಲಿ ನಡೆದಿದೆ ಎನ್ನಲಾದ ವಂಚನೆ ನಿಖರವಾಗಿ ಯಾವ ದಿನಾಂಕದಂದು ನಡೆದಿದೆ ಎಂದು ಹೇಳಬಹುದೇ ಎಂಬ ಪ್ರಶ್ನೆಗೆ ಸಾಕ್ಷಿ ದಿನಾಂಕ 30-07-2014 ರಿಂದ 09-09-2014 ರ ಅವಧಿಯಲ್ಲಿ ವಂಚನೆ ನಡೆದಿತ್ತು, ಆದರೆ ನಿಖರವಾಗಿ ಯಾವ ತಾರಿಖಿನಂದು ಸದರಿ ಅಪರಾಧ ನಡೆದಿತ್ತು ಎಂದು ನನಗೆ ಹೇಳಲು ಆಗುವುದಿಲ್ಲ ಎನ್ನುತ್ತಾರೆ. ಆರೋಪಿ ನಿಮ್ಮ ಪಂಚಾಯತಿಗೆ ವಂಚಿಸಿದ್ದಾನೆ ಎಂದು ನಿಮಗೆ ಯಾವಾಗ ಗೊತ್ತಾಯಿತು ಎಂಬ ಪ್ರಶ್ನೆಗೆ ಸಾಕ್ಷಿ ದಿನಾಂಕ 07-01-2015 ರಂದು ನಡೆಸಿದ ಆಂತರಿಕ ತಪಾಸಣೆ ಕಾಲಕ್ಕೆ ಗೊತ್ತಾಯಿತು ಎನ್ನುತ್ತಾರೆ.

ದಿನಾಂಕ 07-01-2015 ರಂದು ನಡೆದ ಆಂತರಿಕ ತಪಾಸಣೆ ಕಾಲಕ್ಕೆ ಆರೋಪಿ ನಿಮ್ಮ ಪಂಚಾಯತಿಗೆ ವಂಚಿಸಿದ್ದಾನೆ ಎಂದು ಗೊತ್ತಾದ ತಕ್ಷಣ ಆತನ ಮೇಲೆ ಪೊಲೀಸರಿಗೆ ದೂರು ಕೊಟ್ಟಿದ್ದಿರಾ ಎಂದರೆ ಸಾಕ್ಷಿ ತಕ್ಷಣ ಕೊಟ್ಟಿಲ್ಲ, ದಿನಾಂಕ 21-01-2015 ರಂದು ಕೊಟ್ಟಿದ್ದೆವೆ ಎನ್ನುತ್ತಾರೆ. ದೂರು ಕೊಡಲು ತಡ ಯಾಕೆ ಮಾಡಿದ್ದಿರಿ ಎಂಬ ಪ್ರಶ್ನೆಗೆ ಸಾಕ್ಷಿ ಆರೋಪಿಯ ವಂಚನೆ ಬಯಲಾದ ನಂತರ ನಾವು ಆತನಿಗೆ ಮೌಖಿಕವಾಗಿ ಆತ ಪಂಚಾಯತಿಗೆ ವಂಚಿಸಿರುವ ಹಣವನ್ನು ಹಿಂದಿರುಗಿಸುವಂತೆ ಹೇಳಿ ಕಾಲವಕಾಶ ಕೊಟ್ಟಿದ್ದೆವು, ಆದರೆ ಆತ ಹಣ ವಾಪಸ್ಸು ಮಾಡದೆ ಇದ್ದರಿಂದ ತಡವಾಗಿ ದೂರು ಕೊಡಬೇಕಾಯಿತು ಎನ್ನುತ್ತಾರೆ.

ಆರೋಪಿ ಪಂಚಾಯತಿಗೆ ಹಣ ವಾಪಸ್ಸು ಮಾಡಿದ್ದಾನೆಯೇ ಎಂಬ ಪ್ರಶ್ನೆಗೆ ಸಾಕ್ಷಿ ನಾವು ಆತನಿಗೆ ಕೊಟ್ಟ ಕಾಲವಧಿಯಲ್ಲಿ ಆತ ವಾಪಸ್ಸು ಮಾಡಿಲ್ಲ ಎನ್ನುತ್ತಾರೆ. ನೀವು ಕೊಟ್ಟ ಕಾಲವಧಿಯ ನಂತರ ಹಣ ವಾಪಸ್ಸು ಕೊಟ್ಟಿದ್ದಾನೆಯೇ ಎಂಬ ಪ್ರಶ್ನೆಗೆ ಸಾಕ್ಷಿ ದೂರು ಕೊಟ್ಟ ನಂತರ ಅಂದರೆ 2019 ನೇ ಇಸವಿಯಲ್ಲಿ ಆರೋಪಿ ನಮ್ಮ ಪಂಚಾಯತಿಗೆ ವಂಚಿಸಿದ್ದ ರೂ.80,000/- ಹಣವನ್ನು ವಾಪಸ್ಸು ಕೊಟ್ಟಿದ್ದಾನೆ ಎನ್ನುತ್ತಾರೆ. ಆರೋಪಿ ನಿಮ್ಮ ಪಂಚಾಯತಿಗೆ ಹಣ ವಾಪಸ್ಸು ಮಾಡಿರುವ ಬಗ್ಗೆ ದಾಖಲೆಯನ್ನು ಪೊಲೀಸರಿಗೆ ಕೊಟ್ಟಿದ್ದಿರಾ ಎಂಬ ಪ್ರಶ್ನೆಗೆ ಸಾಕ್ಷಿ ಆತ ಹಣ ಹಿಂದಿರುಗಿಸುವ ಕಾಲಕ್ಕೆ ನನ್ನ ವರ್ಗಾವಣೆ ಆಗಿತ್ತು, ಆದರೆ ಆರೋಪಿ ಚಿಂಚೋಳಿಯಿಂದ ಅಫ್ಜಲಪೂರ ಪಂಚಾಯಿತಿಗೆ

ವರ್ಗಾವಣೆಗೊಂಡ ನಂತರ ಅಲ್ಲಿಂದಲೆ ಚಿಂಚೋಳಿ ಪಂಚಾಯತಿಗೆ ಹಣ ವಾಪಸ್ಸು ಕಟ್ಟಿರುವ ಬಗ್ಗೆ ಚಿಂಚೋಳಿ ಪಂಚಾಯತಿಗೆ ಪತ್ರ ವ್ಯವಹಾರ ಆಗಿರುವುದು ನನ್ನ ಗಮನಕ್ಕೆ ಬಂದಿದೆ ಎನ್ನುತ್ತಾರೆ.

ಆರೋಪಿ ಉಪಗ್ರಹ ತರಬೇತಿ ಶಾಖೆಯ ಪ್ರಭಾರವನ್ನು ಯಾವ ದಿನಾಂಕದಂದು ವಹಿಸಿಕೊಂಡಿದ್ದರು ಎಂದು ನನಗೆ ಗೊತ್ತಿಲ್ಲ. ಆ ಬಗ್ಗೆ ನಾನು ಪೊಲೀಸರಿಗೆ ದಾಖಲೆ ಕೊಟ್ಟಿಲ್ಲ.

ನಿಪಿ-1 ರ ದೂರಿನೊಂದಿಗೆ ಆರೋಪಿ ಪಂಚಾಯತಿಗೆ ವಂಚಿಸಿರುವ ಬಗ್ಗೆ ದಾಖಲೆಗಳನ್ನು ಪೊಲೀಸರಿಗೆ ಕೊಟ್ಟಿದ್ದಿರಾ ಎಂಬ ಪ್ರಶ್ನೆಗೆ ಸಾಕ್ಷಿ ಆಂತಿರಿಕ ತನಿಖಾ ವರದಿ ಮತ್ತು ಚೆಕ್ ವಿತರಣಾ ರಜಿಸ್ಟರಗಳನ್ನು ಪೊಲೀಸರಿಗೆ ಕೊಟ್ಟಿದ್ದೇನೆ ಎನ್ನುತ್ತಾರೆ. ನಿಪಿ-1 ರ ದೂರಿನಲ್ಲಿ ಸದರಿ ದಾಖಲೆಗಳನ್ನು ನಾನು ಪೊಲೀಸರಿಗೆ ಕೊಟ್ಟಿರುವ ಬಗ್ಗೆ ನಮೂದು ಇಲ್ಲ ಎಂದರೆ ಸರಿ.

ನಮ್ಮ ಕಚೇರಿ ಕೆಲಸದ ಅವಧಿ ರಜಾ ದಿನಗಳನ್ನು ಹೊರತುಪಡಿಸಿ ಬೆಳಿಗ್ಗೆ 10-00 ರಿಂದ ಸಂಜೆ 05-30 ಆಗಿರುತ್ತದೆ. ಈ ಪ್ರಕರಣದ ಸಾಕ್ಷಿದಾರರಾದ ಚಾಸಾ-6, 7 ಮತ್ತು 9 ರಿಂದ 15 ನಮ್ಮ ಕಚೇರಿ ಸಿಬ್ಬಂದಿ ಎನ್ನುವುದು ಸರಿ.

ಈ ಪ್ರಕರಣದ ಸಂಬಂಧ ದೂರನ್ನು ಹೊರತುಪಡಿಸಿ ನಾನು ಪೊಲೀಸರ ಮುಂದೆ ಒಂದು ಬಾರಿ ಹೇಳಿಕೆ ಕೊಟ್ಟಿದ್ದೇನೆ. ಸದರಿ ಹೇಳಿಕೆಯನ್ನು ಪೊಲೀಸರು ಠಾಣೆಯಲ್ಲಿ ದಾಖಲಿಸಿಕೊಂಡಿದ್ದರು.

**ಈ ಹಂತದಲ್ಲಿ ಆರೋಪಿ ಪರ ವಕೀಲರು ಕಾಲವಕಾಶ ಕೋರಿದ್ದರಿಂದ ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು.**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**
**ಓ.ಹೇ.ಕೇ. ಸರಿ ಇದೆ.**

**ಪ್ರಧಾನ ಪ್ರ.ದ.ನ್ಯಾ.ದಂ. ಚಿಂಚೋಳಿ**